# 8

# ಸ್ತ್ರೀ ಪುರುಷನಿಗೆ ಬೋಧಿಸಬಹುದೇ?

ಕೆಲವು ಸಮಯದ ಹಿಂದೆ, ಖಾಸಗಿಯಾದ ಒಂದು ಸಂದರ್ಭದಲ್ಲಿ, ಒಬ್ಬ ಸ್ತ್ರೀಯು ಯೌವನಸ್ಥನಾದ ಪ್ರಸಂಗಿಗೆ. ಪುರುಷನಿಗೆ ಸ್ತ್ರೀಯು ಬೋಧಿಸುವದು ತಪ್ಪಾಗುತ್ತದೆ ಎಂದು ಹೇಳಿದಳು. "ಆಗ ಆ ಪ್ರಸಂಗಿಯು, ಸ್ತ್ರೀಯು ಪುರುಷನಿಗೆ ಬೋಧಿಸುವದು ತಪ್ಪಾಗುತ್ತದೆ ಎಂದು ನೀನು ನನಗೆ ಬೋಧಿಸುತ್ತಿರುವೆಯಾ?" ಎಂಬ ಮಾತಿನಿಂದ ತನ್ನ ಸಂಭಾಷಣೆಯನ್ನು ಅಂತ್ಯಗೊಳಿಸಿದನು.

## ಎಲ್ಲಾ ಸ್ಥಳಗಳಲ್ಲೂ ಪುರುಷರೇ

1 ತಿಮೊಥಿ 2:8ರಲ್ಲಿ ಪೌಲನು ಪುರುಷರಿಗೆ ಸಲಹೆಗಳನ್ನು ನೀಡಿ, "ಹೀಗಿರಲಾಗಿ ಪುರುಷರು ಎಲ್ಲಾ ಸ್ಥಳಗಳಲ್ಲಿ ಕೋಪವೂ ವಾಗ್ವದವೂ ಇಲ್ಲದವರಾಗಿ ಭಕ್ತಿಪೂರ್ವಕವಾಗಿಯೇ ಕೈಗಳನ್ನೆತ್ತಿ ಪ್ರಾರ್ಥಿಸಬೇಕೆಂದು ಅಪೇಕ್ಷಿಸುತ್ತೇನೆ" ಇಲ್ಲಿ ಪೌಲನು "ಎಲ್ಲಾ ಸ್ಥಳಗಳು" ಎಂದು ಹೇಳಿರುವ ಅರ್ಥವೇನು?

*ಟಪಾಸ್* ಎಂಬ ಪದವು ತರ್ಜುಮೆಗೊಂಡು "ಸ್ಥಳ" ಎಂಬುದಾಗಿಯು ಇದಕ್ಕೆ ಸಹಾಯಕವಾಗಿ *ಪಂಟಿ* ಎಂಬ ಪದವನ್ನು ("ಎಲ್ಲಾ") ಎಂಬುದಾಗಿ ಅರ್ಥೈಸಲಾಗಿದೆ. ಆದಿ ಸಭೆಯವರು ಆರಾಧನೆಗಾಗಿ ಉಪಯೋಗಿಸುತ್ತಿದ್ದ ಸ್ಥಳವನ್ನು ಇದು ಸೂಚಿಸುತ್ತಿತ್ತು (1 ಕೊರಿಂಥ 1:2; 2 ಕೊರಿಂಥ 2:14; 1 ಥೆಸಲೋನಿಕ 1:8; 1 ತಿಮೋಥೆ 2:8). ಬೈಬಲಿನಲ್ಲಿ ಕಾಣುವಂಥ ಈ ಸ್ಥಳಗಳನ್ನೆಲ್ಲಾ, ಪ್ರಪಂಚದ "ಎಲ್ಲಾ ಸ್ಥಳಗಳು" ಎಂದು ತಿಳಿಯಬಾರದು. ಎವರೆಟ್ ಫರ್‌ಗೊಸನ್ ರವರು ಇದರ ಕುರಿತಾದ ತಮ್ಮ ಸಂಶೋಧನೆಯಲ್ಲಿ ಕ್ರೈಸರು ಆರಾಧನೆಗಾಗಿ ಸೇರಿ ಬರುತ್ತಿದ ಸ್ಥಳವನ್ನು *ಪಂಟಿಟಪಾಸ್* ಎಂದು ಕ್ರೈಸ್ತ ಬರವಣಿಗೆಗಳಲ್ಲಿ ಅರ್ಥೈಸಿದ್ದಾರೆ. ಈ ಸಂಗತಿಯು, 1 ತಿಮೊಥೆ 2:8-12ರಲ್ಲಿ ಇರುವ ಕ್ರೈಸ್ತರು ಸಾಮಾನ್ಯವಾಗಿ ಸೇರಿ ಬರುತ್ತಿದ ಸ್ಥಳ ಎಂಬುದಕ್ಕೆ ಬೆಂಬಲ ಸೂಚಿಸುತ್ತದೆ.

ಡಾಂಕರ್ ಬೋವರ್ಸ್‌ರವರು *ಟಪಾಸ್* ಎಂಬ ಪದಕ್ಕೆ ಸಾಮಾನ್ಯ ಸ್ಥಳ ಎಂದಿರುವದನ್ನು ಫರ್‌ಗೂಸನ್‌ರವರು ಒಪ್ಪಿಕೊಳ್ಳುವದಿಲ್ಲ. ಅವರು ತಿಳಿಸಿರುವದೇನೆಂದರೆ, "ಈ ಹೇಳಿಕೆಯು ಸಾಕಾಗುವದಿಲ್ಲ ಯೆಹೂದ್ಯರಲ್ಲಿ ಈ ಹೇಳಿಕೆಯು ಇನ್ನೂ ಬಲವಾದ ಹೇಳಿಕೆಯಾಗಿ. ತಾಂತ್ರೀಕವಾದ ಒಂದು ಆರಾಧನೆಯ ಸ್ಥಳ ಎಂಬುದಾಗಿ ತಿಳಿಸಲ್ಪಡಲಾಗಿತ್ತು."[1]

ನಂತರ ಫರ್‌ಗೂಸನ್‌ರವರು, ಇದರ ಸಾರಾಂಶವನ್ನು ನೀಡಿದ್ದಾರೆ,

> ಯೆಹೂದ್ಯರ ಹಾಗೂ ಆದಿ ಕ್ರೈಸ್ತರ, ಕುರಿತು, ಈ ಅಧ್ಯಾಯನದಲ್ಲಿ *ಎನ್‌ಪಂಟಿ ಟಪಾಸ್* ಎಂಬ 1 ತಿಮೊಥೆ 2:8ರ ಈ ಬಲವಾದ ಅಂಶವನ್ನು (*ಅಂಧ್ರಾಸ್*) ಅಂದರೆ ಪುರುಷರು ಎಂಬುದಾಗಿ ತಿಳಿದು, "ಕ್ರೈಸ್ತ ಸಭೆಯಲ್ಲಿ" ಪುರುಷರೇ ಪ್ರಾರ್ಥನೆ ಮಾಡುವ ನಾಯಕತ್ವವನ್ನು ನಡಿಸಬೇಕು ಎಂದು ಅರ್ಥೈಸಿಕೊಳ್ಳಬೇಕು. ಇದರ ಪರಿಣಾಮವು 1 ಕೊರಿಂಥ 14:33-35ರ ಅರ್ಥಕ್ಕೆ ಸಮಾನವಾಗಿರುತ್ತದೆ.[2]

ಇನ್ನೊಂದು ಬರವಣಿಗೆಯಲ್ಲಿ, ಫರಗೂಸನ್ ಹಾಗೂ ಅವರ ಪತ್ನಿ ಬರೆದಿರುವದೇನೆಂದರೆ *ಟಪಾಸ್* ಎಂಬ ಪದವು ಹೊಂದಿರುವಂತಹ ಇತರ ಅರ್ಥಗಳೊಂದಿಗೆ ಯೆಹೂದ್ಯರು ತಮ್ಮ "ಆಲಯ" ಅಥವಾ ದೇವಾಲಯಕ್ಕೆ ತಾಂತ್ರೀಕವಾಗಿ ಈ ಹೆಸರನ್ನು ನೀಡಿದ್ದರು ಎಂದು

ಮುಂತಿಳಿಸಿದ್ದಾರೆ, ಮತ್ತು ಕ್ರೈಸ್ತರು ಸಹ "ಸಭೆ"[3] ಎಂಬ ಪದಕ್ಕೆ ಯೆಹೂದ್ಯರ ಪ್ರಯೋಗವನ್ನೇ ಮುಂದುವರಿಸಿದರು.

ಇಲ್ಲಿ ತರ್ಜುಮೆಗೊಂಡಿರುವ *ಅಂಧ್ರಾಸ್* ಎಂಬ ಪದ ಪ್ರಯೋಗವು (1 ತಿಮೊಥೆ 2:8)ರ ವಾಖ್ಯಾನದಲ್ಲಿ, "ಪುರುಷ" ಎಂಬ ವಿಶೇಷ ಪದವಾಗಿದ್ದು "ಸ್ತ್ರೀ" ಎಂಬ ಪದಕ್ಕೆ ವಿರುದ್ಧವಾಗಿರುತ್ತದೆ (1 ತಿಮೊಥೆ 2:9) ಅಥವಾ "ಸ್ತ್ರೀ" (1 ತಿಮೊಥೆ 2:11), ಅದನ್ನು "ಗಂಡನು" ಎಂದು ಸಹ ತರ್ಜುಮೆಮಾಡಬಹುದು, "ಪುರುಷ" ಎಂದು ಸಹ ಹೇಳ ಬಹುದಾಗಿದೆ. ಕ್ರೈಸ್ತ ಸಮೂದಾಯದಲ್ಲಿ, ಪ್ರಾರ್ಥನೆಯ ನಾಯಕತ್ವವನ್ನು ಪುರುಷರಿಗೆ ನೀಡಲಾಗಿದೆ. ವಿನಃ ಸ್ತ್ರೀಯರಿಗಲ್ಲ. ಅದರಲ್ಲೂ, ಪರಿಶುದ್ಧವಾದ ಜೀವಿತವನ್ನು ಹೊಂದಿದ್ದ ಪುರುಷರಿಗೆ ಮಾತ್ರ ನೀಡಲಾಗಿತ್ತು. "ಪರಿಶುದ್ಧವಾದ ಕೈಗಳನ್ನೆತ್ತುವ" ವಿಷಯಕ್ಕೂ ಈ ಸಂಗತಿ ಒಳಪಟ್ಟಿರುತ್ತದೆ (1 ತಿಮೊಥೆ 2:8).

## ಅದೇ ರೀತಿಯಾಗಿ ಸ್ತ್ರೀಯರು

ಪುರುಷರು ಮಾತ್ರ ಸಲಹೆಗಳನ್ನು ಹೊಂದಿರಲಿಲ್ಲ, ಅದೇ ರೀತಿಯಾಗಿ "ಸ್ತ್ರೀಯರಿಗೂ" ಸಲಹೆಗಳನ್ನು ನೀಡಲಾಗಿತ್ತು. ಸಭೆಯು ಒಟ್ಟಾಗಿ ಸೇರಿ ಬರುವಂತಹ ವಿಷಯದಲ್ಲಿ ಪೌಲನು ತಿಳಿಸುವದೇನೆಂದರೆ "ಅದೇ ರೀತಿಯಾಗಿ" (ಗ್ರೀಕ್.: *ಹೊಸಟೋಸ್*) ಪೌಲನು ಸ್ತ್ರೀಯರಿಗೂ ಸಲಹೆಗಳನ್ನು ನೀಡಿದನು (1 ತಿಮೊಥೆ 2:9).

"ಗುನೈಕೋಸ್" ತರ್ಜುಮೆಗೊಂಡು "ಸ್ತ್ರೀಯರು" ಅಥವಾ "ಹೆಂಡತಿಯರು" ಎಂಬುದಾಗಿದೆ. ಇದರಲ್ಲಿ ಸರ್ವನಾಮವು ಅಥವಾ ಬರವಣಿಗೆಯು "ಸ್ತ್ರೀಯರು" ಎಂಬುದಾಗಿ ಇರುವದಿಲ್ಲ (1 ತಿಮೊಥೆ 2:9, 10, 11, 12). ಇದು ಸಾಮಾನ್ಯ ಸಭೆಯಲ್ಲಿರುವ ಸ್ತ್ರೀಯರ ಕುರಿತಾಗಿ, ಪೌಲನು ಬರೆದಿರಬಹುದು. ಒಂದು ವೇಳೆ ನಿರ್ದಿಷ್ಟವಾದ ಸ್ತ್ರೀಯರ ಗುಂಪಿಗಾಗಲೀ, ಅಥವಾ ಹೆಂಡತಿಯರಿಗಾಗಲೀ, ಬರೆಯದೇ ಇರಬಹುದು. ಅವರು ಬೆಲೆಯುಳ್ಳ ಆಭರಣಗಳನ್ನು ಧರಿಸಿಕೊಳ್ಳದೆ, ಸರಳವಾದ ವಸ್ತ್ರವನ್ನು ಧರಿಸಿಕೊಳ್ಳ ಬೇಕು ಎಂದು ತಿಳಿಸಿದ್ದಾನೆ. ಅವರು ಸತ್ಕಾರ್ಯಗಳ ಮೂಲಕ ತಮ್ಮ *ಥೆಯೋಸೋಬೀಯವನ್ನು*[4] ತೋರಿಸಬೇಕಿತ್ತು. ಪುರುಷರು ತಮ್ಮ ಕೈಗಳನ್ನು "ಪರಿಶುದ್ಧವಾಗಿಟ್ಟುಕೊಂಡು" ಅದನ್ನು ಪರಿಶುದ್ಧವಾದ ಉದ್ದೇಶಕ್ಕಾಗಿ ಉಪಯೋಗಿಸಬೇಕಿತ್ತು; ಅದೇ ರೀತಿಯಾಗಿ ಸ್ತ್ರೀಯರು ತಾವು ಧರಿಸುವ ವಸ್ತ್ರದ, ಮೂಲಕವಾಗಿ, ಹಾಗೂ ಕ್ರಿಯೆಗಳ ಮೂಲಕವಾಗಿ, ಅವರು ದೇವರಿಗೆ ಸನ್ಮಾನಿಸುವ ಮನಸ್ಸನ್ನು ಹೊಂದಿದ್ದರು ಎಂದು ತೋರ್ಪಡಿಸಬೇಕಾಗಿತ್ತು.

## ಕಲಿಯುವುದು ಹಾಗೂ ಬೋಧಿಸುವುದು

ಪೌಲನು ಬರೆದಿರುವದೇನೆಂದರೆ, "ಸ್ತ್ರೀಯರು ಮೌನವಾಗಿದ್ದು ಪೂರ್ಣವಿಧೇಯರಾಗಿ ಉಪದೇಶವನ್ನು ಕೇಳಬೇಕು. ಉಪದೇಶ ಮಾಡುವದಕ್ಕಾಗಲಿ ಪುರುಷರ ಮೇಲೆ ಅಧಿಕಾರ ನಡೆಸುವದಕ್ಕಾಗಲಿ ಸ್ತ್ರೀಯರಿಗೆ ನಾನು ಅಪ್ಪಣೆ ಕೊಡುವದಿಲ್ಲ" (1 ತಿಮೊಥೆ 2:11, 12). ಇತರೆ ಅನುವಾದಗಳಿಗಿಂತಲೂ, NASBಯು ಯಥಾರ್ಥವಾದ ಅನುವಾದವನ್ನು ನೀಡುತ್ತದೆ. *ಹೆಸುಚಿಯಾ* ಎಂಬ ಈ ವ್ಯಾಖ್ಯಾನದಲ್ಲಿರುವ ಪದವು, ಇತರ ಎಲ್ಲಾ ಅನುವಾದಗಳಲ್ಲಿ "ಮೌನ" ಎಂಬುದನ್ನು "ಮೌನ" ಎಂಬುದಾಗಿಯೇ ತರ್ಜುಮೆ ಮಾಡಿರುವದಿಲ್ಲ (ಗ್ರೀಕ್.: *ಸಿಗ್ಗತೊಸನ್*) 1 ಕೊರಿಂಥ 14:34, ರಲ್ಲಿ ಈ ಪದದ ಅರ್ಥ "ಶಬ್ದ ಮಾಡದೆ ಸುಮ್ಮನಿರಬೇಕು." *ಹೆಸುಚಿಯಾ* (ಅಪೊಸ್ತಲರಕೃತ್ಯಗಳು 22:2; 2 ಥೆಸಲೊನೀಕ 3:12) "ವಿಶ್ರಾಂತಿ" ಅಥವಾ "ನಿಶಬ್ದ" ಎಂಬ ಅಂಶವನ್ನು ನೀಡುತ್ತದೆ. *ಹೆಸುಚಿಯಾ* ಎಂಬ ಪದದಲ್ಲಿಯೂ ಇದೇ ಅರ್ಥವಿರುತ್ತದೆ (1 ತಿಮೊಥೆ 2:2; 1 ಪೇತ್ರ 3:4). ಈ ಪದವು "ಬಾಯಸ್‌ಟೆರೋಸ್" ಎಂಬ ಪದಕ್ಕೆ ತದ್ವಿರುದ್ಧವಾಗಿರುತ್ತದೆ ಮತ್ತು "ಶಬ್ದ ಮಾಡು" (ಅಪೊಸ್ತಲರಕೃತ್ಯಗಳು 22:2; 2 ಥೆಸಲೋನಿಕ 3:12)

ಇದನ್ನು *ಹೆಸುಚಿಯಾ* ಎಂಬ ಕ್ರಿಯಾಪದದಿಂದ ತಿಳಿಯುತ್ತೇವೆ ("ಮೌನ" ಲೂಕ 14:4 "ವಿಶ್ರಾಂತಿ ಪಡೆಯುವಿಕೆ" ಲೂಕ 23:56 "ನಿಶಬ್ದವಾಯಿತು" ಅಪೊಸ್ತಲರಕೃತ್ಯಗಳು 11:18; "ಮೌನವಾದರು" ಅಪೊಸ್ತಲರಕೃತ್ಯಗಳು 21:14 ನಿಶಬ್ದ 1 ಥೆಸಲೋನಿಕ 4:11). ಸ್ತ್ರೀಯರಿಗೆ ನೀಡಲಾದ ಕಲಿಕೆಯು, ಅಧೀನತ್ವ, ಮೌನ, ಗೌರವಾನಿತ್ವ ವಿಷಯಗಳನ್ನು ಒಳಗೊಂಡಿರುತ್ತದೆ - ಆದರೆ ಅದು ಅಗ್ರತ್ವವನ್ನು ಅಧಿಕಾರವನ್ನೂ ಒಳಗೊಂಡಿರುವದಿಲ್ಲ. *ಹೆಸುಚಿಯಾವು;* ಸಭೆಯ ಮಧ್ಯದಲ್ಲಿ ಎದ್ದು ನಿಂತು ಮಾತನಾಡದಂತೆ, ದೀನ ಸ್ವಭಾವವನ್ನೂ ಪಡೆದು, ಕ್ರೈಸ್ತ ಸಭೆಯ ಮೇಲ್ವಿ ಚಾರಣೆಯನ್ನು ತೆಗೆದುಕೊಳ್ಳದಂತೆ ವಿವರಿಸುತ್ತದೆ. ಈ ರೀತಿಯಾದ ಸ್ವಭಾವವನ್ನು ಹೊಂದಿರುವಂತವರು, ಸ್ವಾರ್ಥಿಗಳಾಗಿ ಅಧಿಕಾರ ನಡೆಸದೇ, ತಮ್ಮನ್ನು ತಾವೇ ಪುರುಷರ ನಾಯಕತ್ವಕ್ಕೆ ಅಧೀನಪಡಿಸಿಕೊಳ್ಳುತ್ತಾರೆ.

ಹಾಗೆಯೇ, ಸ್ತ್ರೀಯರು, ಪುರುಷರಿಗೆ ಬೋಧಿಸಬಾರದು. ಖಾಸಗಿಯಾಗಿ ಬೋಧಿಸುವ ವಿಚಾರವು ಇದಕ್ಕೆ ಒಳಪಡುವದಿಲ್ಲ. ಸಭೆಯಾಗಿ ಸೇರಿಬರುವಾಗ, ಬೋಧಿಸಬಾರದು. ನಂಬಿಗಸ್ತರಾದ "ಪುರುಷರಿ"ಗೆ ಕಲಿಸು ಎಂದು ಪೌಲನು, ತಿಮೊಥೆಯನಿಗೆ ತಿಳಿಸಿದ್ದಾನೆ. (*ಅಂತ್ರಪೋಯಿಸ್,* ಅಂದರೆ ಜನರು *ಅಂದ್ರಾಸ್* ಎಂದಾಗಿ ಅಲ್ಲ, "ಪುರುಷರು" ಎಂಬ ಅರ್ಥ) ಮತ್ತು ಅವರು ಇತರರಿಗೂ ಬೋಧಿಸುವರು (2 ತಿಮೊಥಿ 2:2). ಈ ಪದ "ಪುರುಷರು" ಎಂದು ತರ್ಜುಮೆಗೊಂಡಿದೆ, ಅದರ ಅರ್ಥ "ಮಾನವರು" ಎಂಬುದಾಗಿ, ಇದರಲ್ಲಿ ಸ್ತ್ರೀಯರಿಗೂ ಒಳಪಡುತ್ತಾರೆ; ಆದುದರಿಂದ ಇತರರಿಗೆ ಬೋಧಿಸುವಂತೆ, ಸ್ತ್ರೀಯರಿಗೂ ತರಬೇತಿ ನೀಡಬೇಕು ಎಂಬ ಅರ್ಥವಾಗಿದೆ; ಹಿರಿಯ ಸ್ತ್ರೀಯರು ಕಿರಿಯ ಸ್ತ್ರೀಯರಿಗೆ ಕಲಿಸಬೇಕು (ತೀತ 2:3-5). ಪ್ರಿಸ್ಕಿಲ್ಲಳು, ಅಕ್ವಿಲನೂ ಅಪೊಲ್ಲೋಸನನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ ದೇವರ ಮಾರ್ಗವನ್ನು ಇನ್ನೂ ಸೂಕ್ಷ್ಮವಾಗಿ ವಿವರಿಸಿದರು (ಅಪೊಸ್ತಲರಕೃತ್ಯ ಗಳು 18:26). ತಿಮೊಥೆಯನ, ತಾಯಿಯೂ ಅಜ್ಜಿಯೂ ಅವನಿಗೆ ದೇವರ ವಾಕ್ಯವನ್ನು ಕಲಿಸಿದರು (2 ತಿಮೊಥೆ 1:5; 3:15). ಸಭೆಯನ್ನು ಹೊರತು ಪಡಿಸಿ, ಸ್ತ್ರೀಯರು ಪುರುಷರಿಗೆ ಬೋಧಿಸಲು ಅವಕಾಶವಿದೆ, ಮತ್ತು ಇತರರಿಗೆ ಬೋಧಿಸಲು ಅವಕಾಶವಿದೆ. ಇದನ್ನು ಸರಿಯಾದ ಪರಿಸ್ಥಿತಿಯಲ್ಲಿ ಮಾತ್ರ ಮಾಡಬೇಕು, ಇದರಲ್ಲಿ ಯಾವುದೇ ಅಧಿಕಾರವನ್ನು ಚಲಾಯಸಬಾರದು, ಇದನ್ನು ದೀನತೆಯಿಂದಲೂ, ಅಧೀನತೆಯಿಂದಲೂ ಮಾಡಬೇಕು.

## ಅಧಿಕಾರವನ್ನು ಚಲಾಯಿಸುವ ರೀತಿಯಲ್ಲಿ ಮಾಡಬಾರದು

ಸ್ತ್ರೀಯರು *ಅಥೆಂಟೇನ್* ಮಾಡಬಾರದು "ಅವರು ಪುರುಷರ ಮೇಲೆ ಅಧಿಕಾರ ನಡೆಸಬಾರದು" (1 ತಿಮೊಥೆ 2:12) KJV ಅನುವಾದದಲ್ಲಿ "ಅಧಿಕಾರವನ್ನು ಅಪಹರಿಸಬಾರದು" ಅದರ ಅರ್ಥ ತಪ್ಪುದಾರಿಗೆ ಎಳೆ ಎಂಬುದಾಗಿ KJV ಪ್ರಕಾರ ಸ್ತ್ರೀಯರಿಗೆ, ಪುರುಷರಿಂದ ಅಧಿಕಾರ ಕೊಡಲ್ಪಟ್ಟಿದ್ದರೆ, ಅ ಅದಿಕಾರವನ್ನು ಸ್ತ್ರೀಯರು ಚಲಾಯಿಸಲು ಅವಕಾಶವಿದೆ ಎಂದು ಕೆಲವರು ಅಭಿಪ್ರಾಯ ಈ ರೀತಿ ಇರುವದಾದರೆ, ಆಕೆ ಅಧಿಕಾರವನ್ನು ಪುರುಷನಿಂದ ಅಪಹರಿಸಬಾರದು ಹೇಗೂ "ಅಪಹರಿಸು" ಎಂಬ ಪದವು ಗ್ರೀಕ್ ಭಾಷೆಯಲ್ಲಿರುವದಿಲ್ಲ *ಅಥೆಂಟಿನ್* ಎಂಬುದರ ಅರ್ಥ ಅಧಿಕಾರವನ್ನು ಪಡೆ ಎಂಬುದಾಗಿ, ಅಥವಾ ಅಧಿಕಾರವನ್ನು ಅಭ್ಯಾಸಿಸು ಎಂಬುದಾಗಿ ಒಂದು ಸಭಾ ಮಂಡಳಿಯ ಸ್ತ್ರೀಯು, ಪುರುಷರ ಮೇಲೆ ಅಧಿಕಾರ ನಡೆಸಬಾರದು, ಆದರೆ ಅಧೀನರಾಗಿರಬೇಕು. ಸ್ತ್ರೀಯರಿಗೆ ಅಧಿಕಾರ ನೀಡುವಂತೆ, ದೇವರು ಪುರುಷರಿಗೆ ಅಧಿಕಾರ ನೀಡದೆ ಇರುವದರಿಂದ, ಸ್ತ್ರೀಯರಿಗೆ ಅಧಿಕಾರ ನೀಡಲು, ಪುರುಷರಿಗೆ ಯಾವ ಅಧಿಕಾರ ಇರುವದಿಲ್ಲ.

ಈ ಸಂಗತಿಯನ್ನು ಪೌಲನು ಸಂಸ್ಕೃತಿಗನುಸಾರವಾಗಿ ನೀಡದೆ, ಆದಿಕಾಂಡದಲ್ಲಿ ಜರುಗಿದ ಅಪರಾದದ ನಿಮಿತ್ತವಾಗಿಯೂ, ದೇವರ ಸೃಷ್ಟಿಯಲ್ಲಿರುವ ಕ್ರಮದ, ನಿಮಿತ್ತ ವಾಗಿಯೂ, ಸಲಹೆಯನ್ನು ನೀಡಿದ್ದಾನೆ: "ಮೊದಲು ನಿರ್ಮಿತನಾದವನು ಆದಾಮನಲ್ಲವೇ,

ಆ ಮೇಲೆ ಹವ್ವಳು ಇದಲ್ಲದೆ ಆದಾಮನು ವಂಚನೆಗೆ ಒಳಬೀಳಲಿಲ್ಲ. ಸ್ತ್ರೀಯು ವಂಚನೆಗೆ ಒಳಬಿದ್ದು ಅಪರಾದಿಯಾದಳು, ಆದರೂ ಸ್ತ್ರೀಯರು ಮಾನಸ್ಥೆಯರಾಗಿ ನಂಬಿಕೆಯಲ್ಲಿಯೂ ಪ್ರೀತಿಯಲ್ಲಿಯೂ ಪರಿಶುದ್ಧತೆಯಲ್ಲಿಯೂ ನೆಲೆಗೊಂಡಿದ್ದರೆ ಮಕ್ಕಳನ್ನು ಹೆರುವಲ್ಲಿ ರಕ್ಷಣೆ ಹೊಂದುವವರು'' (1 ತಿಮೊಥೆ 2:13-15). ಇಲ್ಲಿ ಹವ್ವಳು ಅಪರಾದಿಯಾಗಿದ್ದಳು ಎಂದು ಪೌಲನು ಹೇಳುತ್ತಿರುವದಿಲ್ಲ, ಆದರೆ "ಸ್ತೀ"ಯು ಅಪರಾಧಿಯಾಗಿದ್ದಳು ಎಂದು ತಿಳಿಸುತ್ತಿದ್ದಾನೆ ("ಮತ್ತು ಅವನು ನಿನ್ನ ಮೇಲೆ ದೊರೆತನ ಮಾಡುವನು"; ಆದಿಕಾಂಡ 3:16) ಈ ನಿಯಮಕ್ಕೆ ಸ್ತ್ರೀಯು ಈಗಲೂ ಒಳಪಡಬೇಕು. ಇದರಿಂದ ಸ್ತ್ರೀಯು (ಹೆರುವಲ್ಲಿ ರಕ್ಷಣೆ ಹೊಂದುವಳು) ಸಂರಕ್ಷಣೆ ಪಡೆಯುವಳು ಎಂಬ ನಿರ್ಣಯವನ್ನು ನೀಡಿರುವನು.

## ಹೆರುವಲ್ಲಿ ರಕ್ಷಣೆ ಹೊಂದವಳು

NASB ಬೈಬಲ್ ಬಹುಶಃ *ಸೊತೆಸೆತಾಯ್* ಎಂಬ ಪದವನ್ನು "ರಕ್ಷಣೆ" ಎಂಬ ಪದದ ಬದಲು "ಸಂರಕ್ಷಣೆ" ಎಂಬುದಾಗಿ ತರ್ಜುಮೆ ಮಾಡಲ್ಪಟ್ಟಿದೆ (1 ತಿಮೊಥೆ 2:15). ಈ ಒಂದು ಹಿನ್ನೆಲೆಗೆ ಈ ಅರ್ಥವು ಸಮರ್ಪಕವಾಗಿರುತ್ತದೆ ಮಕ್ಕಳನ್ನು ಹೆರುವದರ ಮೂಲಕ ಸ್ತ್ರೀಯು ಮಾನವರನ್ನು ಸಂರಕ್ಷಿಸುವಲ್ಲಿ, ಮಾನವ ಪಾತ್ರವನ್ನು ವಹಿಸಿದ್ದಾರೆ. ಇದರ ಜೊತೆಯಲ್ಲಿ, ಅವರ ನಿರಂತರವಾದ ಇರುವಿಕೆಯನ್ನೂ ಸಾಭೀತುಪಡಿಸು ತ್ತಾಳೆ. ''ನಂಬಿಕೆಯಲ್ಲಿಯೂ, ಪ್ರೀತಿಯಲ್ಲಿಯೂ ಮತ್ತು ಪರಿಶುದ್ಧತೆಯಲ್ಲಿಯೂ ನೆಲೆಗೊಂಡಿದ್ದಾರೆ'' (1 ತಿಮೊಥೆ 2:15ಬಿ). ಅಪರಾದದ ನಿಮಿತ್ತ ಅವರು ಕಳಕೊಂಡಿದ್ದ ನಿತ್ಯ ಜೀವನವನ್ನು ಪುನಃ ಪಡೆಯುತ್ತಾರೆ.

ಇದರಲ್ಲಿ ಇರುವಂಥ ಇನ್ನೊಂದು ಸತ್ಯವೇನೆಂದರೆ ಆಕೆಯು ಮಗುವನ್ನು ಹೆರುವದರ ಮೂಲಕ ಸ್ತ್ರೀಯರಿಗೆ ರಕ್ಷಣೆಯನ್ನು ನೀಡಿದ್ದಾಳೆ. ಯೇಸು ಪುರುಷನ ಮೂಲಕವಾಗಿ ಜನಿಸಲಿಲ್ಲ. ಒಬ್ಬ ಸ್ತ್ರೀಯು ಯೇಸುವಿಗೆ ಜನನವನ್ನು ನೀಡಿದ್ದರಿಂದ, ರಕ್ಷಣೆಯು ಸ್ತ್ರೀಯ ಮೂಲಕವಾಗಿ ದೊರೆಯಿತು. ಪುರುಷನನ್ನು ಹೆರುವದರ ಮೂಲಕ ರಕ್ಷಣೆ ಉಂಟಾಗಲಿಲ್ಲ. ಇಲ್ಲಿ ಪೌಲನು, ''ಮಕ್ಕಳನ್ನು ಹೆರುವದರಲ್ಲಿ'' ಎಂಬ ಬಹುಪದವನ್ನು ಉಪಯೋಗಿಸಿರುವದಿಲ್ಲ ಆದರೆ ''ಮಗುವನ್ನು ಹೆರುವಲ್ಲಿ'' ಎಂಬ ಏಕವಚನವನ್ನು ಉಪಯೋಗಿಸಿರುವದರಿಂದ ''... ಆಕೆಯು ರಕ್ಷಿಸಲ್ಪಡುವಳು'' ಎಂಬ ವ್ಯಾಖ್ಯಾನವನ್ನು ನೀಡಲಾಗಿದೆ ''ಹೇಗೂ'' (ಗ್ರೀಕ್ ಭಾಷೆಯಲ್ಲಿ) - ಅವರು ಎಂಬ ಬಹುಪದವನ್ನು - ಉಪಯೋಗಿಸಲಾಗಿದೆ. ಸಾಮಾನ್ಯವಾಗಿ ಸ್ತ್ರೀಯರು ಅವರು ನಂಬಿಕೆಯಲ್ಲಿ ಕ್ರೈಸ್ತ ಜೀವಿತವನ್ನು ಜೀವಿಸುವುದಾದರೆ ಮಾತ್ರ, ಅವರು ರಕ್ಷಣೆಯನ್ನು ಹೊಂದುವರು.

## ಮುಕ್ತಾಯ

ಸಭೆಯಲ್ಲಿರುವ ಸ್ತ್ರೀಯರು ಪುರುಷರ ಮೇಲೆ ಅಧಿಕಾರವನ್ನು ಚಲಾಯಿಸಬಾರದು. ಅವರು ಕಲಿಯುವಂತ ವಿಷಯಗಳಲ್ಲಿ ಸ್ವಾರ್ಥಿಗಳಾಗಿರದೆ, ಸನ್ಮಾನಕ್ಕೆ ಯೋಗ್ಯರಾಗಿರಬೇಕು ಸಭೆಯನ್ನು ಹೊರತುಪಡಿಸಿ, ಇತರೆ ಸ್ಥಳಗಳಲ್ಲಿ ಅವರು ಬೋಧಿಸಬಹುದು. ಪುರುಷರಿಗೆ ಬೋಧಿಸಬಹುದು, ಪ್ರಶ್ನಿಸಬಹುದು, ಚರ್ಚಿಸಬಹುದು. ಪುರುಷರ ಇರುವಿಕೆಯಲ್ಲಿ ಆಕೆಯು ಸಭೆಯನ್ನು ತನ್ನ ಹತೋಟಿಗೆ ತೆಗೆದುಕೊಂಡು, ಅಧಿಕಾರವನ್ನು ಚಲಾಯಿಸಬಾರದು.

ಸಭಾ ಮಂಡಳಿಗಳಲ್ಲಿ, ಸ್ತ್ರೀಯರಿಗೆ ಅಧಿಕಾರವಿಲ್ಲ ಎಂದು ತಿಳಿದು, ಸ್ತ್ರೀಯರು ತಮ್ಮ ಜವಾಬ್ದಾರಿಗಳನ್ನು ಅಲಕ್ಷಮಾಡಬಾರದು. ಆಕೆಯು ತನ್ನ ದೈನಂದಿನ ಸಂಬಂಧಗಳಲ್ಲಿ, ಆಕೆಯು ಅನೇಕರಿಗೆ ಬೋಧಿಸಬಹುದು. ತನ್ನ ಮಕ್ಕಳನ್ನು ದೇವರ ಮಾರ್ಗದಲ್ಲಿ ನಡೆಸುವಂಥ ವಿಶೇಷವಾದ ಸವಾಲನ್ನು ಸ್ತ್ರೀಯು ಹೊಂದಿರುತ್ತಾಳೆ. ಯಾರ್‍ಯಾರು ತಮ್ಮ ತಾಯಿಯಂದಿರ ಬೋಧನೆಗಳನ್ನು ಕೇಳಿದ್ದಾರೋ, ಅಂಥವರು ಇತಿಹಾಸದಲ್ಲಿಯೇ ಉನ್ನತ ಸ್ಥಾನವನ್ನು ಹೊಂದಿದ್ದರು. ದೇವವಾಕ್ಯದ ಧ್ಯಾನದಿಂದಲೂ, ಪ್ರಾರ್ಥನೆಯಿಂದಲೂ, ದೇವರು ಅನುಗ್ರಹಿಸಿರುವಂತ

ಜ್ಞಾನದಿಂದಲೂ, ತುಂಬಿರುವಂತಹ ಕ್ರೈಸ್ತ ಸ್ತ್ರೀಯು ಅನೇಕರ ಜೀವಿತದಲ್ಲೂ ಮತ್ತು ಪರಸ್ಪರ ಸ್ತ್ರೀ ಪುರುಷರಲ್ಲಿಯೂ ವ್ಯತ್ಯಾಸವನ್ನು ಉಂಟುಮಾಡಲು ಸಾಧ್ಯವಿದೆ.

---

ಟಿಪ್ಪಣಿಗಳು

[1]Everett Ferguson, "*Topos* in 1 Timothy 2:8," *Restoration Quarterly* (1 April 1991): 65. [2]Ibid., 73. [3]Everett and Nancy Ferguson, "NT Teaching on the Role of Women in the Assembly," *Gospel Advocate* (October 1990): 30. [4]ಥಿಯೋಸೇಬಿಯಾ ಅದರ ಅಕ್ಷರಶಃ ಅರ್ಥ "ದೇವರಿಗೆ ಘನ" ಎಂಬುದಾಗಿ ಈ ಹೊಸ ಒಡಂಬಡಿಕೆಯ ಭಾಗದಲ್ಲಿ ಮಾತ್ರ ಈ ಪದವು ಇರುತ್ತದೆ. ಇದನ್ನು "ದೇವರ ಆರಾಧನೆ" ಎಂದು NIVತರ್ಜುಮೆ ಮಾಡಲಾಗಿದೆ.

## ಸ್ತ್ರೀ ಮತ್ತು ಬೋಧನೆ

ಯೌವನಸ್ಥರು ಸುವಾರ್ತೆಯನ್ನು ಸಾರಬೇಕು ಎಂದು ಪೌಲನು ತಿಳಿಸಿದ್ದಾನೆ. ಅದೇ ರೀತಿಯಲ್ಲಿ ಸಭಾ ಸದಸ್ಯರಿಗೆ ಅವಶ್ಯವಿರುವ ತರಬೇತಿಯ ಕುರಿತಾಗಿಯೂ ತಿಳಿಸಿದ್ದಾನೆ. ತೀತ 2ರಲ್ಲಿ ಅವನು ಸೂಚಿಸಿರುವಂತೆ, ತೀತನು ವೃದ್ಧ ಸ್ತ್ರೀಯರಿಗೂ ವೃದ್ಧ ಪುರುಷರಿಗೂ ಯೌವನಸ್ಥೆಯರಿಗೂ ಮತ್ತು ಯೌವನಸ್ಥ ಪುರುಷರಿಗೂ ಬೋಧಿಸಬೇಕಿತ್ತು.[1] ತೀತನು ಇವರಿಗೆ ಬೋಧಿಸುವದರಿಂದ, ಅವರು ಇತರರಿಗೆ ಬೋಧಿ ಸಲು ಶಕ್ತರಾಗಿದ್ದರು. ವೃದ್ಧಸ್ತ್ರೀಯರು, ಯೌವನಸ್ಥೆಯರಿಗೆ ಕಲಿಸಲು ಸ್ಪಂದಿಸಬೇಕಿತ್ತು. ಅವರಿಗೆ ಒಳ್ಳೇಯ ಸಂಗತಿಗಳನ್ನು ಕಲಿಸಬೇಕಿತ್ತು "... ಯೌವನಸ್ಥೆಯರಾದ ಹೆಂಡತಿಯರು, ತಮ್ಮ ಗಂಡಂದಿರನ್ನು ಪ್ರೀತಿ ಸಲು ಕಲಿಸಬೇಕಿತ್ತು, ಅವರ ಮಕ್ಕಳನ್ನು ಪ್ರೀತಿಸಲು, ಸ್ಥಿರ ಚಿತ್ತರಾಗಿರಲೂ, ಶುದ್ಧರಾಗಿರಲೂ, ಮನೆಯಲ್ಲಿ ಕೆಲಸಮಾಡುವಂತೆಯೂ, ಕನಿಕರವುಳ್ಳವರಾಗಿರುವಂತೆಯೂ, ಅವರ ಗಂಡದಿರಿಗೆ ಅಧೀನರಾಗುವಂತೆಯೂ ದೇವರ ವಾಕ್ಯಕ್ಕೆ ಅವಮಾನವಾಗದ ರೀತಿಯಲ್ಲಿ ಜೀವಿ ಸುವದಕ್ಕೆ ಬೋಧನೆಗಳನ್ನು ನೀಡಬೇಕಿತ್ತು" (2:3-5).

ಯೌವನಸ್ಥೆಯರಿಗೆ ಬೋಧಿಸಲು, ವೃದ್ಧೆಯರಿಗಿಂತಲೂ ಉತ್ತಮರಾದ ಬೋಧಕರ ಅವಶ್ಯವಿರುವದಿಲ್ಲ? ಯಾಕೆಂದರೆ ಅವರಿಗೆ ಹೆಚ್ಚು ಅನುಭವವಿರುತ್ತದೆ. ಯಾವುದೇ ಒಬ್ಬ ಪ್ರಸಂಗಿಯು, ಸಭೆಯ ಯೌವನಸ್ಥೆಯರಿಗೆ ಬೋಧಿಸಲು, ವೃದ್ಧೆಯರಾದ ಸ್ತ್ರೀಯರನ್ನು ನೇಮಿಸಿಕೊಳ್ಳಬಹುದು, ಆ ಕೂಟಕ್ಕೆ ಅನುಕಾಲವಾಗುವಂತೆ, ಖಾಸಗಿಯಾಗಿ, ಯೌವನಸ್ಥೆಯರಿಗೆ ಸಲಹೆ ಸೂಚನೆಗಳನ್ನು ನೀಡಬಹುದು.

ಸ್ತ್ರೀಯರು ಪ್ರಸಂಗ ಮಾಡಬಾರದು ಎಂದು ಒಂದೇ ಒಂದು ವಚನವು ತಿಳಿಸುತ್ತದೆ. ಅದರ ಅರ್ಥ ಸಭೆಯಾಗಿ ಕೂಡಿಬರುವಾಗ, ಸ್ತ್ರೀಯು ಸಭೆಯನ್ನು ಉದ್ದೇಶಿಸಿ ಅಧಿಕಾರ ಸಹಿತವಾಗಿ ಮಾತನಾಡಬಾರದು 1 ತಿಮೊಥಿ 2:11, 12ರಲ್ಲಿ ನಾವು ಓದುವಂತೆ, "ಸ್ತ್ರೀಯರು, ಮೌನವಾಗಿದ್ದು, ಪೂರ್ಣ ವಿಧೇಯರಾಗಿದ್ದು ಉಪದೇಶವನ್ನು ಕೇಳಬೇಕು. ಉಪದೇಶ ಮಾಡುವದಕ್ಕಾಗಲಿ, ಪುರುಷರ ಮೇಲೆ ಅಧಿಕಾರ ನಡೆಸುವದಕ್ಕಾಗಲಿ ಸ್ತ್ರೀಯರಿಗೆ ನಾನು ಅಪ್ಪಣೆ ಕೊಡುವದಿಲ್ಲ ಅವರು ಮೌನವಾಗಿರಬೇಕು." ಸ್ತ್ರೀಯು *ಹ್ಯೂಪಟೇಜ್* ಅಂದರೆ "ಅಧಿಕಾರಕ್ಕೆ ಒಳಪಡಬೇಕು" ಅಥವಾ "ಅಪ್ಪಣೆಗೆ ಒಳಪಡ ಬೇಕು" ಅವಳು ಈ ಸಲಹೆಗಳನ್ನು ಅಧೀನತೆಯಿಂದ ಸ್ವೀಕರಿಸುವಾಗ, ಪ್ರಸಂಗಿಯು "ಸರ್ವ ಅಧಿಕಾರ" ಹೊಂದುತ್ತಾನೆ, ಅಥವಾ "ಪೂರ್ಣ ಅಧಿಕಾರವನ್ನು ಹೊಂದುತ್ತಾನೆ" (ಗ್ರೀಕ್.: *ಎಪಿಟೇಜ್*) - ತದ್ವಿರುದ್ಧವಾದ ಹಾಗೂ ವ್ಯತಿರೇಖವಾದ ಯೋಚನೆಯನ್ನು ಹೊಂದಿರುತ್ತಾನೆ.

ಅನೇಕ ಕ್ರೈಸ್ತ ಸ್ತ್ರೀಯರು ಅದ್ಭುತವಾದ ಮಕ್ಕಳು ಮತ್ತು ಸ್ತ್ರೀಯರಿಗೆ ಬೋಧಿಸುವವ ರಾಗಿದ್ದಾರೆ, ಆದರೇ ಅವರ ಸರಿಯಾದ ಅಧಿಪತ್ಯ ಸ್ಥಾನವೂ ಉಪದೇಶವೇಧಿಕೆಯಲ್ಲ. ಇದರ ವಿಷಯವಾಗಿ ದೇವರು ಮಾತಡಿದ್ದಾರೆ.

ಎಡ್. ಸ್ಯಾಂಡರ್ಸ್

ಟಿಪ್ಪಣಿ

[1]In 1 Timothy 5 widows and officers in the church (elders) are also dealt with, then slaves. In Titus 2, only slaves are added to the age and sex groupings.